ಶ್ರೀ ಬಿ. ಹೆಚ್. ಯಂಕನಾಯಕ್.—ಬಳ್ಳಾರಿ ಜಿಲ್ಲೆಯ ಶಿರಗುಪ್ಪ, ಬಳ್ಳಾರಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ. ಕೂಡ್ಲಿಗಿ, ಹಡಗಲಿ ಈ ತಾಲ್ಲೂಕುಗಳಿಗೆ ವಿಶ್ವ ಬ್ಯಾಂಕಿನಿಂದ ಕೈಗೊಂಡಂಥ ಯೋಜನೆಯನ್ವಯ ಕಾರ್ಯಕ್ರಮಗಳ ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸವಿದೆ. ಮಲತಾಯಿ ಧೋರಣೆಯನ್ನು ತೋರಲಾಗಿದೆ. ಒಂದು ತಾಲ್ಲೂಕಿಗೆ ೧೯ ಮತ್ತೊಂದು ತಾಲ್ಲೂಕಿಗೆ ೪–೫ ಈ ರೀತಿ ಕೊಟ್ಟಿರುವುದು ಏತಕ್ಕೆ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ವಿಶ್ವಬ್ಯಾಂಕ್ ನೆರವಿನ ಯೋಜನೆಗಳಾಗಿರುವುದರಿಂದ ಸ್ಥಳೀಯ ಪಂಚಾಯತಿಗಳು ನಿವೇಶನಗಳನ್ನು ಒದಗಿಸಿ ಕೊಡಬೇಕಾಗಿದೆ. ಯಾವುದೇ ಪಂಚಾಯತಿಗಳವರು ನಿವೇಶನಗಳನ್ನು ಒದಗಿಸಿ ಕೊಡುವುದಕ್ಕೆಮುಂದೆ ಬಂದಿದ್ದಾರೆ ಅಂತಹ ಕಡೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಆ ಯೋಜನೆಗಳಿಗೆ ಆಯಾಯ ವರ್ಷದ ಕೊನೆಯೊಳಗೆ ಹಣವನ್ನು ವಿರ್ಚು ಮಾಡಬೇಕಾಗಿದೆ. ಎಲ್ಲಿ ನಿವೇಶನಗಳು ದೊರಕಿವೆಯೋ ಅಂತಹ ಕಡೆ ಹೆಚ್ಚು ಹಣ ವಿರ್ಚಾಗಿದೆ. ಇದರಲ್ಲಿ ಮಲತಾಯಿ ಧೋರಣೆ ತೋರಿಸಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಾದ ಯಂಕನಾಯ್ಕರ ಪ್ರಶ್ನೆ ಏನೆಂದರೆ ವಿಶ್ವ ಬ್ಯಾಂಕಿನ ಯೋಜನೆಯನ್ವಯ ಕೈಗೊಂಡಂತಹ ಕಾರ್ಯಕ್ರಮದಲ್ಲಿ ಯಾವ ತಾಲ್ಲೂಕಿನಲ್ಲಿ ಅವಶ್ಯಕತೆ ಇದೆಯೋ ಅಂತಹ ಕಡೆ ಹಣವನ್ನು ವೆಚ್ಚ ಮಾಡದೇ ಎಲ್ಲಿ ಅವಶ್ಯಕತೆ ಇಲ್ಲ ಅಂತಹ ಕಡೆ ಹಣವನ್ನು ವ್ಯಯ ಮಾಡಲಾಗಿದೆ. ಒಬ್ಬರಿಗೊಂದು, ಮತ್ತೊಬ್ಬರಿಗೊಂದು ಮಾಡುವುದು ಸರಿಯಲ್ಲ ಅದನ್ನು ಸರಿಪಡಿಸಿ ಎಲ್ಲರಿಗೂ ನ್ಯಾಯ ಸಿಗುವಂತೆ ಮಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಕೆ. ಹೆಚ್. ಪಾಟೀಲ್‌ರವರು ಸಹ ಕೃಷಿ ಮಂತ್ರಿಗಳಾಗಿದ್ದವರು. ಇಂತಹ ಮಲತಾಯಿ ಧೋರಣೆಯನ್ನು ಯಾವ ಸರ್ಕಾರ ಕೂಡ ಮಾಡುವುದಿಲ್ಲ. ವ್ಯತ್ಯಾಸ ಆಗಿರುವುದು ಮಲತಾಯಿ ಧೋರಣೆಯಿಂದಲ್ಲ. ಸ್ಥಳೀಯ ಪಂಚಾಯತಿಗಳು ನಿವೇಶನ ಕೊಡುವುದರಲ್ಲಿ ಎಲ್ಲಿ ಹಿಂದೆ ಬಿದ್ದಿವೆ ಅಂತಹ ಕಡೆಗಳಲ್ಲಿ ಕಡಿಮೆಯಾಗಿವೆ. ಮಾನ್ಯ ಯಂಕನಾಯ್ಕರ ಕ್ಷೇತ್ರಕ್ಕೆ ೫ ಕಡೆಗಳಿಗೆ ಮಂಜೂರಾತಿ ಮಾಡಿದ್ದೇವೆ. ಮೂರು ಕಡೆಗಳಲ್ಲಿ ನಿವೇಶನವನ್ನು ಕೊಡುವುದಕ್ಕೆ ಸ್ಥಳೀಯ ಪಂಚಾಯತಿಗಳು ಮುಂದೆ ಬಂದಿಲ್ಲ. ತೀವ್ರಗತಿಯಲ್ಲಿ ನಿವೇಶನವನ್ನು ಒದಗಿಸಿಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಯಂಕನಾಯಕ್.—ತಮಗೆ ಎಷ್ಟು ಜಾಗ ಬೇಕೋ ಅಷ್ಟು ಜಾಗವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಮಾನ್ಯ ಕೆ. ಹೆಚ್. ಪಾಟೀಲ್‌ರವರು ಕೃಷಿ ಮಂತ್ರಿಗಳಾಗಿದ್ದಾಗ ಎಲ್ಲರಿಗೂ ಒಂದೇ ರೀತಿಯಲ್ಲಿ ಕೊಡುತ್ತಿದ್ದರು. ತಾವು ಒಂದು ತಾಲ್ಲೂಕಿಗೆ ೧೯ ಮತ್ತೊಂದು ತಾಲ್ಲೂಕಿಗೆ ೪ ಈ ರೀತಿ ಕೊಡಬೇಡಿ ಎಲ್ಲ ತಾಲ್ಲೂಕುಗಳಿಗೂ ಒಂದು ರೀತಿಯಾಗಿ ಪಂಚಿ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಲತಾಯಿ ಧೋರಣೆಯನ್ನು ಎಲ್ಲೂ ತೋರಿಸಿಲ್ಲ. ಎಲ್ಲಿ ನಿವೇಶನಗಳನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ ಅಂತಹ ಕಡೆ ಜಾಸ್ತಿ ಕೊಡಲಾಗಿದೆ. ತಾವು ಕೂಡ ನಿವೇಶನ ಕೊಡಿಸುವುದಕ್ಕೆ ಮುಂದೆ ಬರುವುದಾದರೆ ಇನ್ನು ೫ ಕಡೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಂಗಳೂರಿನಲ್ಲಿ ಜಿಲ್ಲಾ ಕಛೇರಿ ಸಂಕೀರ್ಣ ಕಟ್ಟಡದ ಬಗ್ಗೆ

೧೦೫ (೪೬೪) ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ನೂತನ ಕಛೇರಿ ಸಂಕೀರ್ಣದ ಶಂಕುಸ್ಥಾಪನೆಯಾಗಿ ಒಂದು ವರ್ಷವಾದರೂ ಕೆಲಸ ಪ್ರಾರಂಭಿಸಿ ಅದನ್ನು ಹಠಾತ್ತಾಗಿ ನಿಲ್ಲಿಸಲು ಕಾರಣಗಳೇನು?

ಆ) ಈ ಕಟ್ಟಡದ ಒಟ್ಟು ಮೂಲ ಅಂದಾಜು ವೆಚ್ಚವೆಷ್ಟು, ಇದನ್ನು ಪೂರ್ತಿಗೊಳಿಸಲು ಆಗ ಸೂಚಿಸಿದ ಸಮಯವೆಷ್ಟು?

ಇ) ಕಟ್ಟಡದ ಈಗಿನ ಪರಿಷ್ಕೃತ ಅಂದಾಜು ಮೆಚ್ಚವೆಷ್ಟು ?

ಈ) ಈ ಕಟ್ಟಡವು ಯಾವಾಗ ಪೂರ್ತಿಗೊಳಿಸಬೇಕೆಂದು ಸರ್ಕಾರ ನಿರ್ಧರಿಸಿದೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ಸದರಿ ಕಟ್ಟಡದ ಕೆಲಸಕ್ಕೆ ಗುತ್ತಿಗೆದಾರರನ್ನು ಗೊತ್ತುಪಡಿಸಿ ತಳಪಾಯಕ್ಕಾಗಿ ಮಣ್ಣು ಅಗೆಯುವ ಕೆಲಸ ಪ್ರಾರಂಭ ಮಾಡಿ ಸುಮಾರು ೬ ಮೀಟರು ಆಳದಲ್ಲಿಯೂ ತುಂಬಾ ಮೆದುವಾದ ಮತ್ತು ತುಂಬಿಸಲ್ಪಟ್ಟ (ಫೀಲ್ಡ್ ಆಪ್ ಸಾಯಿಲ್) ಮಣ್ಣು ಸಿಕ್ಕಿದುದರಿಂದ ಈ ವಿಚಾರದಲ್ಲಿ ತಜ್ಞರೊಡನೆ ಸಮಾಲೋಚಿಸಬೇಕಾದುದರಿಂದ ಕೆಲಸವನ್ನು ಅರ್ಧದಲ್ಲಿ ನಿಲ್ಲಿಸಬೇಕಾಯಿತು. ನಂತರ ತಜ್ಞರಿಂದ ''ಪೈಲ್ ತಳಪಾಯ'' ಒದಗಿಸುವಂತೆ ಅಭಿಪ್ರಾಯ ಪಟ್ಟಮೇಲೆ ಆ ಪ್ರಕಾರ ಗುತ್ತಿಗೆದಾರರನ್ನು ಗೊತ್ತುಪಡಿಸಲಾಗಿದ್ದು, ಮಳೆ ಕಡಿಮೆಯಾದ ಮೇಲೆ ಈ ಪೈಲ್ ತಳಪಾಯದ ಕೆಲಸವನ್ನು ಪ್ರಾರಂಭಿಸಲಾಗುವುದು.

ಆ) ಮೂಲ ಅಂದಾಜಿನ ಮೊತ್ತ ೨೨೨ ಲಕ್ಷ ರೂ.ಗಳು. ಮೊದಲನೇ ಹಂತದಲ್ಲಿ ಬಲ ಭಾಗದ ನೆಲಮಾಳಿಗೆ, ನೆಲಅಂತಸ್ತು, ಮೊದಲನೇ ಅಂತಸ್ತು ಮತ್ತು ಎರಡನೇ ಅಂತಸ್ತುಗಳ ಕೆಲಸವನ್ನು ತೆಗೆದುಕೊಳ್ಳಲು ಯೋಚಿಸಲಾಗಿದೆ. ಈ ಹಂತದ ಅಂದಾಜು ೮೫.೮೦ ಲಕ್ಷ ರೂ.ಗಳು. ಈ ಕೆಲಸವನ್ನು ಮುಗಿಸಲು ಮಳೆಗಾಲವನ್ನು ಹೊರತುಪಡಿಸಿ ೪೦ ತಿಂಗಳ ಅವಧಿಯನ್ನು ಗೊತ್ತುಪಡಿಸಲಾಗಿದೆ.

ಇ) ಈಗಲೇ ಹೇಳ ಬರುವುದಿಲ್ಲ.

ಈ) ಮೊದಲನೇ ಹಂತದ ಕೆಲಸವು ೧೯೯೦ನೇ ಇಸವಿಯ ಮಧ್ಯ ಭಾಗದಲ್ಲಿ ಮುಗಿಸುವ ಕಾರ್ಯಕ್ರಮವಿದೆ.

ಧಾರವಾಡದಲ್ಲಿರುವ ಸರ್ಕಾರಿ ಶಿಕ್ಷಕರ ತರಬೇತಿ ಮಹಾವಿದ್ಯಾಲಯಂಕ್ಕೆ ಕಾಯಂ ಮಾನ್ಯತೆ ನೀಡುವುದು

೧೧೧ (೫೮೬) ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೫೬ರಲ್ಲಿ ಪ್ರಾರಂಭವಾದ ಧಾರವಾಡದ ಉಪಾಧ್ಯಾಯರ ಸರ್ಕಾರ ತರಬೇತಿ ವಿದ್ಯಾಲಯ ಸಂಸ್ಥೆಯನ್ನು ಕಾಯಂ ಆಗಿ ಸರ್ಕಾರದವರು ಪರಿಗಣಿಸದೇ ಇರುವುದಕ್ಕೆ ಕಾರಣವೇನು?

ಆ) ಈ ಸಂಸ್ಥೆಯ ನೌಕರರು ಮಾಸಿಕ ಸಂಬಳ ಪಡೆಯುವಲ್ಲಿ ಈವರೆಗೆ ತೊಂದರೆ ಅನುಭವಿಸುತ್ತ ಬಂದಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ರಾಷ್ಟ್ರೀಯ ಶಿಕ್ಷಣ ನೀತಿಯಂತೆ ಶಿಕ್ಷಕರ ತರಬೇತಿ ಕೇಂದ್ರಗಳನ್ನು ಆಧ್ಯತೆಯ ಮೇಲೆ ಬಲಪಡಿಸುವ ಧೋರಣೆ ಇದ್ದಾಗ್ಯೂ ಸರ್ಕಾರದವರು ಈ ದಿಸೆಯಲ್ಲಿ ಈ ಸಂಸ್ಥೆ ಹಾಗೂ ಶಿಕ್ಷಕರ ಕೇಂದ್ರ ಇವೆರಡನ್ನು ಬಲಪಡಿಸಲು ಕ್ರಮತೆಗೆದುಕೊಳ್ಳದೆ ಇರಲು ಕಾರಣವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಸಂಸ್ಥೆಯು ಕಳೆದ ವರ್ಷದಿಂದ ಖಾಯಂ ಆಗಿ ಪರಿಗಣಿಸಿದೆ.

ಆ) ಇಲ್ಲ.

ಇ) ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಉದ್ದೇಶಗಳನ್ನು ಮುಂದಿಟ್ಟುಕೊಂಡು ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವ ಸಮಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಹಾಸನ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಶಾಲೆಗಳು

೧೧೭ (೫೬೦) ಶ್ರೀ ಬಿ.ವಿ. ಕರೀಗೌಡ (ಹಾಸನ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ : —

ಅ) ಹಾಸನ ತಾಲ್ಲೂಕಿನಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು :—